ದಿನಾಂಕ **:04.11.2024** ರಂದು ಪಿಡಬ್ಲ್ಯೂ - 2 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಶ್ರೀ ಎಂ.ಕೆ.ವಿ.ಕೆ. 1 ನೇ ಪ್ರತಿವಾದಿ ಪರ ವಕೀಲರಿಂದಃ

ನಾನು ಮತ್ತು ನನ್ನ ತಾಯಿಯವರು ಹಾಗೂ ಈ ದಾವೆಯ 2 ರಿಂದ 4 ನೇ ಪ್ರತಿವಾದಿಯರು ಮರೋಡಿ, ಮಾಂಟ್ರಾಡಿ ಮತ್ತು ಪೆರಾಡಿ ನಮ್ಮ ಕುಟುಂಬದ ಅಳಿಯ ಸಂತಾನ ಸ್ವತ್ತುಗಳಿಗೆ ಸಂಬಂಧಿಸಿದಂತೆ ಮೂಡಬಿದ್ರೆಯಲ್ಲಿ ಅಸಲು ದಾವೆ 155/2019 ರಂತೆ ದಾವೆ ಸಲ್ಲಿಸಿದ್ದೇವೆ. ಈ ದಾವೆಯ 1 ನೇ ಪ್ರತಿವಾದಿಯು ಸದರಿ ಮೂಡಬಿದ್ರೆ ನ್ಯಾಯಾಲಯದಲ್ಲಿ ನಮ್ಮ ಕುಟುಂಬದ ಸದಸ್ಯರ ಮತ್ತು ಈ ದಾವೆಯ 2 ರಿಂದ 4 ನೇ ಪ್ರತಿವಾದಿಯರ ವಿರುದ್ಧ ಅಸಲು ದಾವೆ 219/2020 ರಂತೆ ದಾವೆ ಸಲ್ಲಿಸಿದ್ದಾರೆ. ಪ್ರಸ್ತುತ ದಾವೆಯನ್ನೊಳಗೊಂಡು 2 ದಾವೆಗಳನ್ನು ರಾಜಿ ಮಾಡಿಕೊಳ್ಳಬೇಕು ಎನ್ನುವ ಉದ್ದೇಶದಿಂದ ನಾವೆಲ್ಲರೂ ಹಲವು ಬಾರಿ ಸೇರಿದ್ದೇವೆ. ಈ ದಾವೆಯಗಳ ಪೂರ್ವದಲ್ಲಿ ಸುಭಾಷ್ ಚಂದ್ರ ಮತ್ತು ಶಾರದ ರವರು ಬೆಳ್ತಂಗಡಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ 34/2014 ರಂತೆ ನಮ್ಮಗಳ ವಿರುದ್ಧ ದಾವೆ ಸಲ್ಲಿಸಿರುತ್ತಾರೆ. ಅದರಲ್ಲಿ ನಾವುಗಳು ಮತ್ತು ಈ ದಾವೆಯ 1 ನೇ ಪ್ರತಿವಾದಿ, 1 ನೇ ಪ್ರತಿವಾದಿಯ ದಿವಂಗತ ಶ್ರೀಧರ ಪಾಂಡೆಯವರ ಹೆಂಡತಿ ಮತ್ತು ಮಕ್ಕಳು

ಪ್ರತಿವಾದಿಯರಾಗಿರುತ್ತೇವೆ. ನಮ್ಮ ಅಳಿಯ ಸಂತಾನ ಕುಟುಬಂದಲ್ಲಿ ದಿ:28.06.1997 ರಂದು ಆದಂತಹ ನೊಂದಾಯಿತ ಪಾಲುಪಟ್ಟಿ ಸರಿ ಇರುವುದಿಲ್ಲ ಎಂದು ಪ್ರಶ್ನಿಸಿ, ತಮಗೂ ಪಾಲು ಬೇಕು ಎಂದು ಸದರಿ ದಾವೆಯನ್ನು ಸುಭಾಷ್ ಚಂದ್ರ ಮತ್ತು ಶಾರದ ರವರು ಸಲ್ಲಿಸಿದ್ದರು. ಸದರಿ ದಾವೆಯಲ್ಲಿ 1 ನೇ ಪ್ರತಿವಾದಿ ಮತ್ತು ನನ್ನ ತಾಯಿ 8 ಮತ್ತು 10 ನೇ ಪ್ರತಿವಾದಿಯರಾಗಿದ್ದಾರೆ. ಸದರಿ ದಾವೆಯಲ್ಲಿ 9 ನೇ ಪ್ರತಿವಾದಿಯಾದಂತಹ ಸುಮಾನಾ ಜಿ.ಯವರು ಮರಣ ಹೊಂದಿರುತ್ತಾರೆ. ಸದರಿ ಸುಮಾನ ಜಿ.ಯವರ ಮಗ ಸುಧೀನ್ ರವರು 15 ಪ್ರತಿವಾದಿಯಾಗಿರುತ್ತಾರೆ. ಸದರಿ ದಾವೆಯಲ್ಲಿ 1 ನೇ ಪ್ರತಿವಾದಿಯು, ಸುಧೀನ್ ಕುಮಾರ್ ರವರು ಮತ್ತು ನನ್ನ ತಾಯಿ ಮತ್ತು ಅವರ ತಂಗಿ ಸರಸ್ವತಿಯವರು, 2 ನೇ ಪ್ರತಿವಾದಿಯವರು ಪ್ರತ್ಯೇಕವಾಗಿ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದಾರೆ. ಈಗ ನನಗೆ ಸದರಿ ದಾವೆಯ ವಾದ ಪತ್ರವನ್ನು ಮತ್ತು ಪ್ರತಿವಾದ ಪತ್ರಗಳನ್ನು ಹಾಗೂ ಅದರ ಜೊತೆ ಇರುವಂತಹ ಪ್ರಮಾಣ ಪತ್ರಗಳನ್ನು ತೋರಿಸಿದ್ದು, ಅವುಗಳನ್ನು ನಾನು ಒಪ್ಪಿಕೊಂಡ ಕಾರಣ ಅವುಗಳನ್ನು ಒಟ್ಟಾಗಿ ನಿಡಿ - 1 ಎಂದು ಗುರುತಿಸಲಾಯಿತು. ಅಸಲು ದಾವೆ 34/2014 ದಾವೆಯು ಪ್ರಕರಣವನ್ನು ಮುಂದುವರಿಸದ ಕಾರಣ ವಜಾ ಆಗಿರುತ್ತದೆ ಎಂದರೆ ಸರಿ. ಅದರಲ್ಲಿನ 1 ನೇ ವಾದಿಯಾದಂತಹ ಸುಭಾಷ್ ಚಂದ್ರ ಪಾಂಡೆಯವರು ಈಗ ಮರಣ ಹೊಂದಿದ್ದಾರೆ. 2 ನೇ ವಾದಿಯು ದಾವೆಯನ್ನು ಮುಂದುವರಿಸದ ಕಾರಣ ದಾವೆ ವಜಾ ಆಗಿರುತ್ತದೆ. ಅದರಲ್ಲಿ ನಾವೆಲ್ಲರೂ ನಿಜ ಸ್ಥಿತಿಯನ್ನು ನಮೂದಿಸಿ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದೇವೆ.

ನನಗೆ ತಿಳುವಳಿಕೆ ಬರುವ ಸಮಯದಲ್ಲಿ ನಮ್ಮ ಕುಟುಬಂದ ಸ್ವತ್ತನ್ನು 1 ನೇ ಪ್ರತಿವಾದಿಯ ಮತ್ತು ನನ್ನ ತಾಯಿಯ ಮಾವರಾದ ಶಾಂತಿ ರಾಜ ಪಾಂಡೆ ಯವರು ನೋಡಿಕೊಂಡು ಬರುತ್ತಿದ್ದರು. ಅವರು ಮರಣ ಹೊಂದಿದ ನಂತರ ಅವರ ತಮ್ಮ ದಿನರಾಜ ಪಾಂಡೆಯವರು ನೋಡಿಕೊಳ್ಳುತ್ತಿದ್ದರು. ದಿನರಾಜ ಪಾಂಡೆಯವರು ಮರಣ ಹೊಂದಿದ ನಂತರ 1 ನೇ ಪ್ರತಿವಾದಿಯು ಕುಟುಬಂದ ಹಿರಿಯರಾಗಿರುತ್ತಾರೆ. ನಮ್ಮ ಅಳಿಯ ಸಂತಾನ ಕುಟುಂಬದಲ್ಲಿ ಬೈಲರ್ಕೆ ಮನೆಯು ಮಾಂಟ್ರಾಡಿ ಗ್ರಾಮದಲ್ಲಿ ಇರುತ್ತದೆ. ಗುಡ್ಡನ ಬೆಟ್ಟು ಎನ್ನುವ ನಮ್ಮ ಕುಟುಂಬದ ಇನ್ನೊಂದು ಮನೆಯು ಮರೋಡಿ ಗ್ರಾಮದಲ್ಲಿರುತ್ತದೆ. ಬೈಲರ್ಕೆ ಮನೆಯಲ್ಲಿ ಕುಟುಂಬದ ದೈವದೇವರುಗಳು ಇರುತ್ತದೆ. ಸದರಿ ದೈವಗಳಿಗೆ ಕುಟುಂಬದಿಂದ ಪರ್ವ ಇತ್ಯಾದಿಗಳು ಪ್ರತೀ ವರ್ಷ ನಡೆಯುತ್ತದೆ. ಮರೋಡಿ ಗ್ರಾಮದ ಗುಡ್ಡನ ಬೆಟ್ಟು ಎನ್ನುವ ಗುತ್ತು ಮನೆ ಇರುತ್ತದೆ. ಅಲ್ಲಿ ಕೊಡಮಣಿತ್ತಾಯ ದೈವ, ದುಗ್ಗಲಾಯ ಎಂಬ ದೈವಗಳ ದೈವಸ್ಥಾನಗಳು ಇರುತ್ತದೆ. ಅದೇ ಮನೆಯಲ್ಲಿ ಗ್ರಾಮದ ಕೊಡಮಣಿತ್ತಾಯ ದೈವದ ದೈವ ಭಂಡಾರ ಮನೆ ಇರುತ್ತದೆ. ಸದರಿ ದೈವಗಳಿಗೆ ವಾರ್ಷಿಕವಾಗಿ ಕಾಲಕಾಲಕ್ಕೆ ತಂಬಿಲ, ಕೋಲ ಇತ್ಯಾದಿ ಕಾರ್ಯಕ್ರಮಗಳ ಜರುಗುತ್ತದೆ. ಈ ಗ್ರಾಮಗಳಲ್ಲಿ ನಮ್ಮ ಕುಟುಂಬಕ್ಕೆ ಮತ್ತು ಕುಟುಂಬದ ಸದಸ್ಯರಿಗೆ ವಿಶೇಷವಾದಂತಹ ಗೌರವ ನೀಡಲಾಗುತ್ತದೆ. ನಮ್ಮ ನಡುವೆ ದಾವೆ ನಡೆಯುತ್ತಿರುವ ಸಮಯದಲ್ಲೂ ಸಹಾ ಮರೋಡಿ ಗ್ರಾಮದಲ್ಲಿ ಕೊಡಮಣಿತ್ತಾಯ ಬ್ರಹ್ಮ ಬೈದರ್ಕಳ ದೈವಸ್ಥಾನದಲ್ಲಿ

ಫಲಾರಗೋಳಿಯಲ್ಲಿ ಎಲ್ಲರ ಸಹಕಾರದಿಂದ ಜೀರ್ಣೋದ್ಧಾರ ಕಾರ್ಯಕ್ರಮ ನಡೆದಿರುತ್ತದೆ. ಶಾಂತಿ ರಾಜ ಪಾಂಡೆ , ದಿನರಾಜ ಪಾಂಡೆ ಹಾಗೂ 1 ನೇ ಪ್ರತಿವಾದಿಯವರ ಸಮಯದಲ್ಲೂ ಸಹಾ ಫಲಾರಗೋಳಿಯಲ್ಲಿ ಅವರ ಯಜಮಾನಿಕೆಯಲ್ಲಿ ಕಾರ್ಯಕ್ರಮಗಳು ನಡೆಯುತ್ತಿತ್ತು. ನಮ್ಮ ಕುಟುಂಬದಲ್ಲಿ ಹಿಂದಿನಿಂದಲೂ ಕಂಬಳ ಗದ್ದೆ , ಬಾಕಿಮಾರು ಗದ್ದೆ ಇವುಗಳನ್ನು ಊರಿನ ಪುರೋಹಿತರು ಬಂದು ಕುಟುಂಬದ ಯಜಮಾನರ ಉಪಸ್ಥಿತಿಯಲ್ಲಿ ನಡೆಸುತ್ತಿದ್ದರು. ಹಾಗೂ ಇವತ್ತಿನವರೆಗೂ ನಡೆದುಕೊಂಡು ಬರುತ್ತಿದೆ. ಈ ಎಲ್ಲಾ ವಿಚಾರಗಳನ್ನು ಅಸಲು ದಾವೆ 34/2014 ರಲ್ಲಿ ನಾವು ಪ್ರತಿವಾದ ಪತ್ರದಲ್ಲಿ ನಿಡಿ - 1 ರ ಪ್ರಕಾರ ತಿಳಿಸಿದ್ದೇವೆ ಎಂದರೆ ಸರಿ. 2013 ರಿಂದ ನಮ್ಮ ಕುಟುಂಬದಲ್ಲಿ ರಾಜಿ ಪಂಚಾಯಿತಿಗಳು ನಡೆಯುತ್ತಾ ಬಂದಿದೆ. 2013 ಮಿಜಾರು ಜೀವಂದರ್ ಜೈನ್ ಮತ್ತು 3 ನೇ ವಾದಿಯ ಗಂಡನ ಅಣ್ಣ ಕೃಷ್ಣರಾಜ ಹೆಗ್ಡೆ ಯವರ ಸಮಕ್ಷಮ ರಾಜಿ ಕೂಡಾ ಆಗಿರುತ್ತದೆ ಎಂದರೆ ಸರಿ. ಅವರಿಬ್ಬರೂ ಸಹಾ ಸಮಾಜದಲ್ಲಿ ಪ್ರತಿಷ್ಟಿತ ವ್ಯಕ್ತಿಗಳು ಎಂದರೆ ಸರಿ. ಜೀವಂದರ್ ಜೈನ್ ರವರು ಈಗ ಮರಣ ಹೊಂದಿರುತ್ತಾರೆ. ಕೃಷ್ಣರಾಜ ಹೆಗ್ಡೆಯವರು ಈಗ ತಮ್ಮ ತಮ್ಮನ ಹೆಂಡತಿ ಈ ವ್ಯಾಜ್ಯದಲ್ಲಿರುವ ಕಾರಣದಿಂದ ರಾಜಿ ಮಾಡಲು ದಾಕ್ಷಿಣ್ಯದಿಂದ ಬರುತ್ತಿಲ್ಲ. ಆದರೂ ನಾವು ರಾಜಿ ಮಾತುಕತೆ ಮಾಡುತ್ತಿದ್ದೇವೆ.

ಹಿಂದೆ 2013 ರಲ್ಲಿ ರಾಜಿ ಮಾತುಕತೆಯಾದ ಸಮಯದಲ್ಲಿ ಶ್ರೀಧರ ಪಾಂಡೆಯವರು ಮೃತರಾಗಿದ್ದು, ಆಗ ಅವರ ಹೆಂಡತಿ ಮತ್ತು ಮಕ್ಕಳು ಇದ್ದರು.

ಎಲ್ಲಾ ಪಂಚಾಯಿತಿಯ ಮಾತುಕತೆಯಲ್ಲಿ ಪರಾಡಿ, ಮರೋಡಿ ಮತ್ತು ಮಾಂಟ್ರಾಡಿ ಗ್ರಾಮದಲ್ಲಿರುವ ನಮ್ಮ ಕುಟುಬಂದ ಆಸ್ತಿಗಳಲ್ಲದೆ, 1 ನೇ ಪ್ರತಿವಾದಿಯ ಸ್ವಾದೀನದಲ್ಲಿರುವ ಸಾಣೂರು ಗ್ರಾಮದ ಸ್ವತ್ತು ಮತ್ತು ಶ್ರೀಧರ ಪಾಂಡೆಯವರು ಹೆಂಡತಿ ಮತ್ತು ಮಕ್ಕಳು ಸ್ವಾದೀನದಲ್ಲಿರುವ ಇರ್ವತ್ತೂರಿನ ಮತ್ತು ಬೆಳುವಾಯಿ ಗ್ರಾಮದ ಸ್ವತ್ತುಗಳು ಕೂಡಾ ಒಳಗೊಂಡಿರುತ್ತದೆ. ಈಗ ಸುಮಾರು 1 ವರ್ಷದ ಹಿಂದೆ ನಾವುಗಳು ರಾಜಿಗೆ ಒಪ್ಪಿಕೊಂಡಿದ್ದು, ಅದರ ಪ್ರಕಾರವಾಗಿ ಈಗ ನನಗೆ ತೋರಿಸಿದ ಪ್ರತಿಯಂತೆ ರಾಜಿಗೆ ಒಪ್ಪಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ಪ್ರತಿಯನು ನಿಡಿ - 2 ಎಂದು ಗುರುತಿಸಲಾಯಿತು. ಸದರಿ ದಿನ ಅಂದರೆ ದಿಃ10.10.2021 ರಂದು ನನ್ನ ಸಮಕ್ಷಮದಲ್ಲಿ ಸದರಿ ರಾಜಿ ಒಪ್ಪಂದವನ್ನು ಮಾಡಿ ಸಹಿ ಮಾಡಿಸಲಾಗಿರುತ್ತದೆ ಎಂದರೆ ಸರಿ.

1 ನೇ ಪ್ರತಿವಾದಿಯ ಸ್ವಾಧೀನಾನುಭವದಲ್ಲಿರುವಂತಹ ಸಾಣೂರು ಗ್ರಾಮದಲ್ಲಿರುವ ಮನೆಗೆ / ಸ್ವತ್ತಿಗೆ ಚಿಕ್ಕಬೆಟ್ಟು ಮನೆ ಎಂದು ಕರೆಯುತ್ತಾರೆ. ಶ್ರೀಧರ ಪಾಂಡೆಯವರ ಸ್ವಾ ದೀನದಲ್ಲಿದ್ದ ಮತ್ತು ಅವರ ಮರಣದ ನಂತರ ಅವರ ಹೆಂಡತಿ ಮತ್ತು ಮಕ್ಕಳ ಸ್ವಾದೀನದಲ್ಲಿರುವ ಇರ್ವತ್ತೂರು ಹಾಗೂ ಬೆಳುವಾಯಿ ಗ್ರಾಮದ ಸ್ವತ್ತುಗಳಿಗೆ ಐದೊಟ್ಟು ಆಸ್ತಿ ಎಂದು ಹಾಗೂ ಮನೆಯನ್ನು ಐದೊಟ್ಟು ಎಂದು ಕರೆಯುತ್ತಾರೆ. ಐದೊಟ್ಟು ಮನೆಯಲ್ಲಿ ದೈವ ದೇವರುಗಳಿಗೆ ಶ್ರೀಧರ ಪಾಂಡೆಯವರು ಮತ್ತು ಚಿಕ್ಕಬೆಟ್ಟು ಮನೆಯಲ್ಲಿರುವ ದೈವದೇವರುಗಳಿಗೆ 1 ನೇ ಪ್ರತಿವಾದಿಯು ವಿನಿಯೋಗಗಳನ್ನು ನಡೆಸಿಕೊಡಯಿ

ಬರುತ್ತಿದ್ದಾರೆ ಎಂದರೆ ಸರಿ. ಕುಟುಂಬದ ಸ್ವತ್ತುಗಳಲ್ಲಿ ಮತ್ತು ಚಿಕ್ಕಬೆಟ್ಟುವಿನಲ್ಲಿ ನಾಗ ಪೂಜೆ ನಡೆಯುತ್ತದೆ ಎಂದರೆ ಸರಿ. ಇರ್ವತ್ತೂರಿನ ಮತ್ತು ಬೆಳುವಾಯಿಯ ಸ್ವತ್ತು ಗಳು ಶ್ರೀಧರ ಪಾಂಡೆಯವರ ಸ್ವಾ ದೀನದಲ್ಲಿ ಮತ್ತು ಸಾಣೂರು ಗ್ರಾಮದ ಸ್ವತ್ತುಗಳು 1 ನೇ ಪ್ರತಿವಾದಿಯ ಸ್ವಾಧೀನದಲ್ಲಿತ್ತು ಎಂದರೆ ಸರಿ. ಶ್ರೀಧರ ಪಾಂಡೆಯವರು ತಮ್ಮ ಸಹೋದರರೊಂದಿಗೆ ತಮ್ಮ ಪಾಲಿಗೆ ಬಂದಂತಹ ಸ್ವತ್ತುಗಳಲ್ಲಿ ಬೋರ್ ವೆಲ್ ತೆಗೆದು, ಗದ್ದೆ ಮತ್ತು ಅಡಿಕೆ ತೋಟಗಳನ್ನು ಅಭಿವೃದ್ದಿಪಡಿಸಿದ್ದಾರೆ ಎಂದರೆ ಸರಿ. ಸದರಿ ಬೋರ್ ವೆಲ್ ತಗೆಯುವ ಗುತ್ತಿಗೆ ನನಗೆ ನೀಡಿದ್ದರು. ಅಲ್ಲಿರುವಂತಹ ಮನೆಗಳನ್ನೂ ಸಹಾ ಅವರೇ ರಿಪೇರಿ ಮಾಡಿಸಿದ್ದಾರೆ. ಹಾಗೆಯೇ ಸಾಣೂರಿನಲ್ಲಿರುವ ಸ್ವತ್ತುಗಳನ್ನೂ ಸಹಾ 1 ನೇ ಪ್ರತಿವಾದಿಯು ಅಭಿವೃದ್ಧಿ ಪಡಿಸಿ ಗದ್ದೆಯನ್ನು , ಅಡಿಕೆ ತೋಟವನ್ನು ಮಾಡಿರುತ್ತಾರೆ ಎಂದರೆ ಸರಿ. ಇರ್ವತ್ತೂರು ಗ್ರಾಮದ ಶ್ರೀಧರ ಪಾಂಡೆಯವರ ಪಾಲಿನಲ್ಲಿದ್ದಂತಹ ಐದೊಟ್ಟು ಮನೆಯ ಭಾವಡಿಯಲ್ಲಿ ರಕ್ತೇಶ್ವರಿ ಮತ್ತು ಧೂಮಾವತಿ ದೈವಗಳು ಇರುತ್ತದೆ. ಸದರಿ ಮನೆಯಿಂದ ಇರ್ವತ್ತೂರು ಆದಿನಾಥೇಶ್ವರ ಸ್ವಾ ಮಿಯ ಪೂಜೆಗಳು ವಾರ್ಷಿಕವಾಗಿ ಸಲ್ಲುತ್ತದೆ. ಸಾಣೂರು ಚಿಕ್ಕಬೆಟ್ಟು ಮನೆಯಿಂದ ಕಾರ್ಕಳದ ಹಿರಿಯಂಗಡಿ ಗುರುಬಸದಿಗೆ ವಾರ್ಷಿಕವಾಗಿ ಪೂಜೆಗಳು ನಡೆಯುತ್ತದೆ ಎಂದರೆ ಸರಿ. ಶ್ರೀಧರ ಪಾಂಡೆಯವರು ಮರಣ ಹೊಂದಿದ ನಂತರ ಇರ್ವತ್ತೂರು ಗ್ರಾಮದ ಜೈನ ಬಸದಿಯಲ್ಲಿ ಅವರ ಅಭಿಷೇಖಗಳು ಅಲ್ಲೇ ನಡೆಯುತ್ತದೆ ಎಂದರೆ ಸರಿ. ನನ್ನ ತಾಯಿಯ ತಾಯಿ ಅಂದರೆ ದಿವಂಗತ ಪದ್ಮಾವತಿಯವರ ಅಭಿಷೇಖವು ಕಾರ್ಕಳದ ಹಿರಿಯಂಗಡಿ

ಗುರುಬಸದಿಯಲ್ಲಿ ನಡೆಯುತ್ತದೆ ಎಂದರೆ ಸರಿ. ಅದನ್ನು 1 ನೇ ಪ್ರತಿವಾದಿಯು ನಡೆಸಿದ್ದಾರೆ ಎಂದರೆ ಸರಿ. ನನಗೆ ತಿಳುವಳಿಕೆ ಬಂದ ನಂತರ ಶ್ರೀಧರ ಪಾಂಡೆಯವರು ಅವರ ಪಾಲಿಗೆ ಬಂದಂತಹ ಇರ್ವತ್ತೂರು ಮತ್ತು ಬೆಳುವಾಯಿ ಸ್ವತ್ತುಗಳನ್ನು ಮತ್ತು 1 ನೇ ಪ್ರತಿವಾದಿಯ ಸಾಣೂರು ಗ್ರಾಮದ ಸ್ವತ್ತುಗಳನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ಅವರಿಬ್ಬರ ನಡುವೆ ಒಳ್ಳೆಯ ಸಂಬಂಧ ಮತ್ತು ಅನ್ಯೋನ್ಯತೆ ಇತ್ತು ಎಂದರೆ ಸರಿ.

ದಿ:10.10.201 ರಂದು ನಡೆದ ನಿಡಿ - 2 ರ ಪಂಚಾಯಿತಿಕೆಯಲ್ಲಿ 1 ಮತ್ತು 2 ನೇ ವಾದಿಯರ ಕವರಿಗೆ ಮರೋಡಿ ಗ್ರಾಮದ ಗುಡ್ಡನಬೆಟ್ಟು ಸಂಪೂರ್ಣ ಸ್ವತ್ತು ಬರಬೇಕು ಎಂದು ತೀರ್ಮಾನವಾಗಿರುತ್ತದೆ. ಮಾಂಟ್ರಾಡಿ ಗ್ರಾಮದ ಬೈಲರ್ಕೆ ಮನೆ ಮತ್ತು ಸ್ವತ್ತುಗಳು ಹಾಗೂ ಪೆರಾಡಿ ಗ್ರಾಮದ ಸ್ವತ್ತುಗಳು ಮೃತ ಸುಮನಾಜಿಯವರ ಕವರಿಗೆ ಬರಬೇಕು ಎಂದು ತೀರ್ಮಾನವಾಗಿರುತ್ತದೆ. ಅದರಂತೆ 1 ನೇ ಪ್ರತಿವಾದಿಯು ತಮಗೆ ಸರ್ಕಾರದಿಂದ ದರ್ಕಾಸು ಪಡೆದ ಸ್ವತ್ತಿನಲ್ಲಿ ಸಾಣೂರು ಗ್ರಾಮದಲ್ಲಿ ತನ್ನ ಪಾಲಿನ ಆಸ್ತಿಯ ಪೈಕಿ ಸ್ವಲ್ಪ ಪುಂಜ ಸ್ವತ್ತನ್ನು ತಮ್ಮ ಮೂವರು ಸಹೋದರಿಯರ ಶಾಖೆಗೆ ಸೂಕ್ತ ದಾಖಲೆಗಳ ಮೂಲಕ ಕೊಡುವುದಾಗಿ ಒಪ್ಪಿಕೊಂಡಿರುತ್ತಾರೆ. ಅದರಂತೆ ಶ್ರೀಧರ ಪಾಂಡೆಯವರ ಹೆಂಡತಿ ಮತ್ತು ಮಕ್ಕಳು ತಮಗೆ ಸರ್ಕಾರದಿಂದ ದರ್ಕಾಸು ಪಡೆದ ಸ್ವತ್ತಿನಲ್ಲಿ ಸ್ವಲ್ಪ ಸ್ವತ್ತನ್ನು ಶ್ರೀಧರ ಪಾಂಡೆಯವರ ಮೂವರು ಸಹೋದರಿಯರ ಶಾಖೆಗೆ ಸೂಕ್ತ ದಾಖಲೆಗಳ ಮೂಲಕ ಕೊಡುವುದಾಗಿ ಒಪ್ಪಿಕೊಂಡಿರುತ್ತಾರೆ. ಶ್ರೀಧರ

ಪಾಂಡೆಯವರ ಹೆಂಡತಿ ಮತ್ತು ಮಕ್ಕಳು ಸುಮನಾಜೆಯವರ ಮಕ್ಕಳಿಗೆ 4.90 ಎಕರೆ ಸ್ವತ್ತನ್ನು ಸೂಕ್ತ ದಾಖಲೆಗಳೊಂದಿಗೆ ಬರೆದುಕೊಡುವುದಾಗಿ ಒಪ್ಪಿಕೊಂಡಿರುತ್ತಾರೆ. ಈ ಮಾತುಕತೆ ನಡೆಯುವ ಸಮಯದಲ್ಲಿ 1 ನೇ ಪ್ರತಿವಾದಿಯು ನಮ್ಮಗಳ ವಿರುದ್ಧ ಅಸಲುದಾವೆ 219/2020 ರಂತೆ ಮೂಡಬಿದ್ರೆ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುತ್ತಾರೆ. ಸದರಿ ದಾವೆಯಲ್ಲಿ ಕುಟುಂಬದ ಆಸ್ತಿಗಳು ಪಾಲಾಗುವವರೆಗೂ ತಮ್ಮ ಯಜಮಾನಿಕೆಗೆ ಅಡ್ಡ ಬರಬಾರದು ಎಂದು ತಡೆಯಾಜ್ಞೆ ಕೋರಿ ಸದರಿ ದಾವೆ ಸಲ್ಲಿಸಿರುತ್ತಾರೆ. ಸದರಿ ದಾವೆ ತನಿಖೆಗೆ ಬಾಕಿ ಇರುತ್ತದೆ. ಸದರಿ ನ್ಯಾಯಾಲಯವು ನಾವುಗಳು 1 ನೇ ಪ್ರತಿವಾದಿಯ ಯಜಮಾನಿಕೆಗೆ ಅಡ್ಡ ಬರಬಾರದು ಎಂದು ತಾತ್ಕಾಲಿಕ ತಡೆಯಾಜ್ಞೆ ನೀಡಿರುತ್ತದೆ. ಹಾಗೆ ತಡೆಯಾಜ್ಞೆ ಇದ್ದರೂ ಸಹಾ, ರಾಜಿಯಲ್ಲಿ ಒಪ್ಪಿಕೊಂಡಂತೆ 1 ನೇ ಪ್ರತಿವಾದಿಯ ಆಡಳಿತದಲ್ಲಿದ್ದಂತಹ ಕುಟುಂಬದ ಸ್ವತ್ತುಗಳನ್ನು ಅವರ ಸಹೋದರಿಯರು ಮತ್ತು ಅವರ ಮಕ್ಕಳು ಸ್ವಾಧೀನದಲ್ಲಿದ್ದು, ಅನುಭವಿಸಿಕೊಂಡು ಬರುತ್ತಿದ್ದು, 1 ನೇ ಪ್ರತಿವಾದಿಯು ನಾವುಗಳು ಅನುಭವಿಸುತ್ತಿರುವ ಸ್ವತ್ತುಗಳಿಗೆ ನಮಗೆ ಅಡ್ಡಿಪಡಿಸಿರುವುದಿಲ್ಲ. ಈಗ 1 ನೇ ಪ್ರತಿವಾದಿಗೆ ಆರೋಗ್ಯ ಸರಿ ಇರುವುದಿಲ್ಲ ಮತ್ತು ಅವರು ಮನೆಯಿಂದ ಹೊರ ಹೋಗಲು ಆಗುತ್ತಿಲ್ಲ ಎಂದರೆ ಸರಿ.

ಎಲ್ಲಾ ದಾವೆಗಳಲ್ಲಿ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ನಡೆಯುತ್ತಿರುವ ಕ್ರಿಮಿನಲ್ ಪ್ರಕರಣ ಸಿಸಿ ಸಂಖ್ಯೆ 261/2019 ರಲ್ಲಿ ನನ್ನ ವಿಳಾಸ

ರಾಜಗಿರಿ, ಕಾಂಚನ ಗ್ರಾಮ, ರಾಜಗಿರಿ ಮನೆ, ಪುತ್ತೂರು ತಾಲೂಕು ಎಂದು ನಮೂದಿಸಿದ್ದೇನೆ ಎಂದರೆ ಸರಿ. ಸದರಿ ಕ್ರಿಮಿನಲ್ ಪ್ರಕರಣದ ಚಾರ್ಜ್ ಶೀಟ್ ಮತ್ತು ಇತರೆ ದಾಖಲೆಗಳನ್ನು ನನಗೆ ತೋರಿಸಿದ್ದು, ಅದನ್ನು ನಾನು ಒಪ್ಪಿಕೊಂಡ ಕಾರಣ ನಿಡಿ - 3 ಎಂದು ಗುರುತಿಸಲಾಯಿತು. ಅದರ ಪ್ರಕಾರವಾಗಿ ನಾವುಗಳೆಲ್ಲ ಈ ದಾವೆ ನಡೆಯುತ್ತಿರುವಾಗ, 1 ನೇ ಪ್ರತಿವಾದಿಯ ಕಚೇರಿಗೆ ಹೋಗಿ ಅವಾಚ್ಯ ಶಬ್ದಗಳಿಂದ ಬೈದು, ಜೀವ ಸಹಿತ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುತ್ತೇವೆ ಎಂದು ದಾಖಲಾಗಿರುತ್ತದೆ ಎಂದರೆ ಸರಿ.

ಈ ದಾವೆಗೆ ವಕೀಲರಿಗೆ ಅನುಭವ ನೀಡುವಾಗ ನಾನು ಬಂದಿರಲಿಲ್ಲ. ದಾವಾ ಸ್ವತ್ತಿನ ಮೂಲ ಹಕ್ಕುದಾರರಾದ ಜಿನ್ನಪ್ಪ ಹೆಗ್ಡೆಯವರನ್ನು ನಾನು ನೋಡಿರುವುದಿಲ್ಲ. ನಾನು ಹುಟ್ಟುವ ಪೂರ್ವದಲ್ಲಿಯೇ ಅವರು ಮರಣ ಹೊಂದಿದ್ದಾರೆ. ಜಿನ್ನಪ್ಪ ಹೆಗ್ಡೆಯವರು ಕೊಲೆಯಾಗಿ ಮರಣ ಹೊಂದಿರುತ್ತಾರೆ. ಜಿನ್ನಪ ಹೆಗ್ಡೆಯವರನ್ನು ಕೊಲೆ ಮಾಡಿದಂತಹ ಆರೋಪಿತರಿಗೆ ಶಿಕ್ಷೆಯಾಗಿರುವ ವಿಚಾರ ನನಗೆ ತಿಳಿದಿರುತ್ತದೆ. ಜಿನ್ನಪ್ಪ ಹೆಗ್ಡೆಯವರು ಯಾವಾಗ ಮರಣ ಹೊಂದಿರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಅವರ ಅಳಿಯ ಅವರನ್ನು ಕೊಲೆ ಮಾಡಿರುತ್ತಾರೆ ಎಂದು ತಿಳಿದುಕೊಂಡಿದ್ದೇನೆ. ಈಗ ನನಗೆ ಅವರ ಮರಣ ಪ್ರಮಾಣ ಪತ್ರವನ್ನು ತೋರಿಸಿದ್ದು, ಅದನ್ನು ಒಪ್ಪಿಕೊಂಡ ಕಾರಣ ನಿಡಿ - 4 ಎಂದು ಗುರುತಿಸಲಾಯಿತು. ಉತ್ತರಾಧಿಕಾರ ಕಾನೂನು 1956 ರಲ್ಲಿ ಬಂದಿರುವ ವಿಚಾರ ನನಗೆ ತಿಳಿದಿಲ್ಲ. ಅಂದರೆ ಜಿನ್ನಪ್ಪ ಹೆಗ್ಡೆಯವರು

ಉತ್ತರಾಧಿಕಾರ ಕಾನೂನು ಬರುವ ಪೂರ್ವದಲ್ಲಿಯೇ ಮರಣ ಹೊಂದಿದ್ದಾರೆ ಎನ್ನುವ ವಿಚಾರ ನನಗೆ ಈಗ ತಿಳಿದಿರುತ್ತದೆ. ಜಿನ್ನಪ್ಪ ಹೆಗ್ಡೆಯವರು ಮರಣ ಹೊಂದುವಾಗ, 1 ನೇ ಪ್ರತಿವಾದಿ, ನನ್ನ ತಾಯಿ ಮತ್ತು ಅವರ ಸಹೋದರಿಯರು ಅಪ್ರಾಪ್ತ ವಯಸ್ಕರು ಎಂದರೆ ಸರಿ. ಜಿನ್ನಪ್ಪ ಹೆಗ್ಡೆಯವರು ಮರಣ ಹೊಂದಿದ ನಂತರ ಶ್ರೀಧರ ಪಾಂಡೆ ಮತ್ತು 1 ನೇ ಪ್ರತಿವಾದಿಯು ಪಾಲು ಮಾಡಿಕೊಳ್ಳುವವರೆಗೆ ಸಾಣೂರು, ಇರ್ವತ್ತೂರು ಮತ್ತು ಬೆಳುವಾಯಿಯ ಎಲ್ಲಾ ಸ್ವತ್ತುಗಳು 1 ನೇ ಪ್ರತಿವಾದಿಯ ಸ್ವಾಧೀನದಲ್ಲಿತ್ತು. ಅವರ ತಾಯಿ ಮರಣ ಹೊಂದಿದ ನಂತರ ಶ್ರೀಧರ ಪಾಂಡೆ ಮತ್ತು 1 ನೇ ಪ್ರತಿವಾದಿಯು ಬಾಯಿ ಮಾತಿನಲ್ಲಿ ಪಾಲು ಮಾಡಿಕೊಂಡು ಬೆಳುವಾಯಿಯ ಮತ್ತು ಇರ್ವತ್ತೂರಿನ ಸ್ವತ್ತುಗಳನ್ನು ಶ್ರೀಧರ ಪಾಂಡೆಯವರು ಹಾಗೂ ಸಾಣೂರಿನ ಸ್ವತ್ತುಗಳನ್ನು 1 ನೇ ಪ್ರತಿವಾದಿಯು ಅನುಭವಿಸಿಕೊಂಡು ಬರುತ್ತಿದ್ದರು ಎಂದರೆ ಸರಿ. ಎಲ್ಲಾ ಸಹೋದರ ಸಹೋದರಿಯರ ಮದುವೆ ಮಾಡಿಸಿ, 1 ನೇ ಪ್ರತಿವಾದಿಯು ಮದುವೆಯಾಗುವಾಗ ಅವರಿಗೆ 44 ವರ್ಷ ವಯಸ್ಸಾಗಿತ್ತು. ಶ್ರೀಧರ ಪಾಂಡೆಯವರಿಗೂ ಮತ್ತು 1 ನೇ ಪ್ರತಿವಾದಿಗೂ ಸುಮಾರು 11 ವರ್ಷಗಳ ಅಂತರವಿರುತ್ತದೆ. 1 ನೇ ಪ್ರತಿವಾದಿಯು 1979 ರಲ್ಲಿ ತಮ್ಮ ಸಹೋದರಿ ಸರಸ್ವತಿ ಮತ್ತು ತಮ್ಮ ಶ್ರೀಧರ ಪಾಂಡೆ ಇವರೆಲ್ಲರೂ ಒಟ್ಟಿಗೆ ಮದುವೆಯಾಗಿರುತ್ತಾರೆ. ನಮ್ಮೊಳಗೆ ಭಿನ್ನಾಭಿಪ್ರಾಯ ಬರುವವರೆಗೆ ನಾವೆಲ್ಲರೂ ಅನ್ಯೋನ್ಯತೆಯಿಂದ ಇದ್ದೆವು. ನನ್ನ ಅಜ್ಜ ಜಿನ್ನಪ್ಪ ಹೆಗ್ಡೆ ಮತ್ತು ಜಿನರಾಜ ಪಾಂಡೆಯವರು ಅನ್ಯೋನ್ಯತೆಯಿಂದ ಇದ್ದರು ಎಂದರೆ ಸರಿ. ಈಗ ನನಗೆ ಒಂದು ವಿಲ್ ನ

ಪ್ರತಿಯನ್ನು ತೋರಿಸಿದ್ದು, ಅದನ್ನು ನಾನು ಇಲ್ಲಿಯವರೆಗೂ ನೋಡಿರುವುದಿಲ್ಲ. ಜಿನರಾಜ ಪಾಂಡೆ ಎಂದರೆ ನನ್ನ ಅಜ್ಜಿಯ ತಮ್ಮ. ಅಂದರೆ ಜಿನ್ನಪ್ಪ ಹೆಗ್ಡೆಯವರ ಹೆಂಡತಿಯ ತಮ್ಮ.

ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,
ಕಾರ್ಕಳ.